# ಭೂಪಾಲದ ರಾಣಿ ಕಮಲಾಪತಿ

**ಡಾ. ನಿವೇದಿತಾ ಸ್ವಾಮಿ**
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಕಮಲಾಪೂರ ಜಿ: ಕಲಬುರಗಿ.

**Article Link: https://aksharasurya.com/2023/07/nivedita-swamy/**

ಭಾರತದ ಮಧ್ಯಪ್ರದೇಶ ರಾಜ್ಯದ ರಾಜಧಾನಿ ಭೂಪಾಲದಲ್ಲಿ ಇತ್ತೀಚಿಗೆ ಪ್ರಧಾನ ಮಂತ್ರಿಗಳು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಶ್ರೇಣಿಯ ಹೈಟೆಕ್ ರೈಲು ನಿಲ್ದಾಣ ಉದ್ಘಾಟಿಸಿದ ಸಮಾಚಾರ ಕೇವಲ ದೇಶದಲ್ಲಿ ಅಷ್ಟೇ ಅಲ್ಲ ವಿದೇಶದಲ್ಲೂ ಭಾರತೀಯ ರೇಲ್ವೆಯ ಕುರಿತು ಹುಬ್ಬೇರಿಸುವಂತೆ ಮಾಡಿದೆ. ಅದೇ ರೈಲ್ವೇ ಇಲಾಖೆ, ಅದೇ ಸಿಬ್ಬಂದಿ ಆದರೂ ದೂರದೃಷ್ಟಿಯ ನಾಯಕತ್ವದಿಂದಾಗಿ ನಿಗದಿತ ಸಮಯದಲ್ಲಿ ರೈಲ್ವೆ ಹೊಸತೊಂದು ಮಾದರಿ ಪ್ರಸ್ತುತ ಪಡಿಸಿದೆ. ದೇಶದ ಎಲ್ಲ ರೈಲು ನಿಲ್ದಾಣಗಳಿಗಿಂತಲು ವಿಶೇಷ ಎನ್ನಲು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಶ್ರೇಣಿಯ ಹೈಟೆಕ್ ರೈಲು ನಿಲ್ದಾಣ ಎನ್ನುವುದು ಮೊದಲ ಕಾರಣ. ಇಲ್ಲಿಯವರೆಗೆ ಹಬೀಬಗಂಜ ರೈಲು ನಿಲ್ದಾಣವಾಗಿತ್ತು. ಈಗ ರೈಲುನಿಲ್ದಾಣದ ಹೆಸರು ರಾಣಿ ಕಮಲಾಪತಿ ರೈಲು ನಿಲ್ದಾಣ ಎಂದು ಹೆಸರಿಸಲಾಗಿದೆ. **ಸ್ಟೇಶನ್‌ನ ಭವ್ಯತೆ ಮಾತ್ರವಲ್ಲ ವನವಾಸಿ ರಾಣಿ ಕಮಲಾಪತಿ ಹೆಸರಿನ ಕಾರಣದಿಂದ ರೈಲುನಿಲ್ದಾಣ ಭಾರತೀಯ ರೈಲಿನ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆಯಬಹುದಾದ ಘಳಿಗೆ ಎನ್ನಬಹುದು**. ಮಧ್ಯಪ್ರದೇಶದ ರಾಜ್ಯದ ರಾಜಧಾನಿಯಾದ ಭೂಪಾಲ ನಗರದ ಜನರೂ ಮರೆತಿರಬಹುದಾದ ರಾಣಿ ಕಮಲಾಪತಿ ಹೆಸರು ಇಡಲಾಗಿದೆ. ಯಾರಿವಳು? ರಾಣಿ ಕಮಲಾಪತಿ? ಇತಿಹಾಸದ ಪುಟಗಳಲ್ಲಿ ಮರೆಯಾದ ರಾಣಿ ಕಮಲಾಪತಿ, ಯಾರ ಹೆಸರನ್ನು ಭೂಪಾಲನ ಹಬೀಬಗಂಜ ರೈಲುನಿಲ್ದಾಣಕ್ಕೆ ಇಡಲಾಗಿದೆಯೋ ಅವಳ ಇತಿಹಾಸ ಅರಿಯುವ ಕುತೂಹಲ ಗರಿಗೆದರುತ್ತದೆ. ಆಲ ಜೋಹರ ಒಪ್ಪಿಕೊಂಡು ಜಲಸಮಾಧಿಯಾದವಳು ರಾಣಿ ಕಮಲಾಪತಿ ಎಂಬುದನ್ನು ತಿಳಿದಾಗ ನಮ್ಮ ಮೈ ಮನ ಜುಮ್ಮೆನಿಸುತ್ತದೆ.

ಭೂಪಾಲ ತಲಾಬ ಅರ್ಥಾತ್ ಸರೋವರದ ಬಗ್ಗೆ **"ತಾಲೋಂಮೇ ತಾಲ ಭೂಪಾಲ ಕಾ ತಾಲ ಬಾಕಿ ಸಬ್ ತಲಯ್ಯಾ" ಉಜ್ಜಯುನಿ ದೊರೆ ರಾಜಾ ಭೋಜ ನಿರ್ಮಿಸಿದ ಏಷ್ಯಾದ ಅತಿದೊಡ್ಡ ತಲಾಬ (ಸರೋವರ) ಎಂದು ಪ್ರಸಿದ್ಧಿ ಪಡೆದಿದೆ**

**ಭೂಪಾಲ ತಲಾಬ**. ಭೂಪಾಲ ತಲಾಬಗೆ ಮತ್ತು ರಾಣಿ ಕಮಲಾಪತಿ ಸರಿಸಾಟಿಯಲ್ಲ ಎಂಬ ಅರ್ಥದಲ್ಲಿ **"ತಾಲ ಹೈ ತೋ ಭೂಪಾಲ ತಾಲ ಬಾಕಿ ಸಬ್ ತಲೈಯ್ಯಾ ರಾಣಿ ಹೈ ತೋ ಕಮಲಾಪತಿ ಔರ್ ಸಬ್ ರಾಣಿಯಾ"** ಇದರ ಅರ್ಥ ತಲಾಬ ಯಾವುದಾದರಿದ್ದಲ್ಲಿ ಭೂಪಾಲದ ತಲಾಬ, ಉಳಿದೆಲ್ಲವೂ ಮಾತ್ರ ಕೆರೆಗಳು, ರಾಣಿ ಎಂದರೆ ರಾಣಿ ಕಮಲಾಪತಿ ಉಳಿದವರೆಲ್ಲ ಕೇವಲ ರಾಣಿಯರು ಎಂಬ ನಾಣ್ಣುಡಿ ಪ್ರಚಲಿತವಿದೆ.

ಭೂಪಾಲದಲ್ಲಿ ಹಿಂದೂ ರಾಜನ ಹೆಸರು ಕೇಳಿದ್ದರೆ ಅದು ರಾಜ ಭೋಜನ ಹೆಸರು ಮಾತ್ರವಿದೆ. ರಾಣಿ ಕಮಲಾಪತಿ ಎಲ್ಲಿಂದ ಬಂದಳು? ಎಂಬ ಪ್ರಶ್ನೆಗಳು ಮನದಲ್ಲಿ ಮೂಡುತ್ತವೆ. **ಯಾವ ಪದ್ಮಾವತಿ ತನ್ನ ಶೀಲ ಮಾನ ರಕ್ಷಣೆಗಾಗಿ ಜೋಹಾರ ಮೂಲಕ ಅಗ್ನಿಗರ್ಪಿಸಿಕೊಂಡಳೋ ಹಾಗೆ ರಾಣಿ ಕಮಲಪಾತಿಯನ್ನು ಮಧ್ಯಪ್ರದೇಶ ಪದ್ಮಾವತಿ ಎನ್ನಬಹುದು**. ರಜಪೂತ ರಾಣಿ ಪದ್ಮಾವತಿಯ ಜೋಹರ ಒಪ್ಪಿಕೊಂಡು ಅಗ್ನಿಗೆ ಸಮರ್ಪಿಸಿಕೊಂಡಂತೆ ತನ್ನ ಮಾನ ಪ್ರಾಣ ರಕ್ಷಣೆಗಾಗಿ ಜಲಜೋಹರ ಸ್ವೀಕರಿಸಿ ಜಲಸಮಾಧಿಯಾದವಳು ರಾಣಿ ಕಮಲಾಪತಿ.

16ನೇ ಶತಮಾನದಲ್ಲಿ ಭೂಪಾಲ ಪ್ರದೇಶಲ್ಲಿ ಹಿಂದೂ ಗೊಂಡ ಮನೆತನದ ರಾಜರು ಹೊರಡಿಸಿದ ಶಾಸನವಿತ್ತು. ಗೋಂಡವಾನ್ ಶಬ್ದದಿಂದ ಗೊಂಡ ಶಬ್ದ ಉತ್ಪತ್ತಿಯಾಗಿದೆ. ಗೊಂಡ್ವಾನಾ ಆದಿವಾಸಿ ಪ್ರದೇಶವು ವಿದರ್ಭ, ಮಧ್ಯಪ್ರದೇಶ, ಛತ್ತಿಸಗಡ, ತೆಲಂಗಾಣ, ಮತ್ತು ಓರಿಸ್ಸಾವರೆಗೆ ವಿಸ್ತರಿಸಿತ್ತು. ಗಿನೌರಗಡ ರಾಜಾ ನಿಜಾಮಷಹಾ ಭೂಪಾಲ ಸಮೀಪದ ಗಿನೌರಗಡದಿಂದ ರಾಜ್ಯ ಸಂಚಾರ ಮಾಡುತ್ತಿದ್ದನು. ಕೆಳ ಜಾತಿಯ ರಾಣಿ ಕಮಲಾಪತಿ ಭೂಪಾಲದ ಹಿಂದೂ ರಾಣಿ. ತಂದೆಯ ಹೆಸರು ರಾಜಾ ಕೃಪಾಲ ಸಿಂಗ್ ಸರೂತಿ. ರಾಣಿ ಕಮಲಾಪತಿ ಕುದರೆ ಸವಾರಿ ಕತ್ತಿವರಸೆಯಲ್ಲಿ ಪ್ರಾವಿಣ್ಯತೆ ಪಡೆದಿದ್ದಳು. ವಿದ್ಯಾವಂತಳಾಗಿದ್ದಳು ತ್ರೀಲೋಕ ಸುಂದರಿ. ಅವಳು ತನ್ನ ತಂದೆಯ ಜೊತೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಆಕ್ರಮಣ ಮಾಡಿ ರಾಜ್ಯವನ್ನು ರಕ್ಷಿಸಿಕೊಂಡಳು. ಅಪಾರ ಅನುಭವ ಹೊಂದಿದ್ದಳು. ಅವಳ ವಿವಾಹ ಗಿನ್ನೋರಘಡದ ಹಿಂದೂ ಗೊಂಡ ರಾಜಾ ಸೂರಜಸಿಂಗ್ ಮಗ ರಾಜಾ ನಿಜಾಮಷಾಹನೊಂದಿಗೆ ನಿಶ್ಚಯಗೊಂಡಿತ್ತು. ರಾಣಿ ರಾಜನ 7 ರಾಣಿಯರಲ್ಲಿ ಅತಿ ಪ್ರೀತಿಯ ರಾಣಿಯಾಗಿದ್ದಳು. 17ನೇ ಶತಮಾನದಲ್ಲಿ ನಿಜಾಮಷಾಹ ತನ್ನ ಪತ್ನಿಯ ಪ್ರೇಮದ

ಸಂಕೇತವಾಗಿ ಭೂಪಾಲದ ಕಮಲಾ ಪಾರ್ಕನಲ್ಲಿ 7 ಅಂತಸ್ತಿನ ಮಹಲ ನಿರ್ಮಿಸಿದ್ದನು.

ಅಧಿಕಾರದ ಮೋಹ ಕುಟುಂಬದಲ್ಲಿ ಹೆಚ್ಚಾಯಿತು. ರಾಜಾ ನಿಜಾಮಷಾಹನ ಅಳಿಯ ಅಲಂಷಹಾನಿಗೆ ಅಧಿಕಾರದ ವ್ಯಾಮೋಹ ಹೆಚ್ಚಿತು. ಜೊತೆಗೆ ರಾಣಿಯ ಮೇಲೆ ಮೋಹವಾಯ್ತು. ಪತಿವ್ರತೆ ರಾಣಿ ಅವನ ಪ್ರೇಮ ಪ್ರಸ್ತಾಪ ತಿರಸ್ಕರಿಸಿದಳು. ಆಲಮಷಹನಿಗೆ ಗಿನೌರಗಡ ರಾಜ್ಯವನ್ನು ಕಬಳಿಸಲು ಹವಣಿಸಿದ. ಯುದ್ಧ ಮಾಡಲು ಅಸಾಧ್ಯ ಎನ್ನಿಸಿತು. ಆಗ ಆತನಿಗೆ ತನ್ನ ಅಸ್ಥಾನಕ್ಕೆ ಆಹ್ವಾನಿಸಿ ಹೇಗಾದರೂ ಮಾಡಿ ಸಂಚಿನಿಂದ ಕೊಲೆ ಮಾಡಲು ಆಲೋಚಿಸಿದ. ನಿಜಾಮಷಾಹನಿಗೆ ಆತಿಥ್ಯದ ಆಮಂತ್ರಣ ನೀಡಿ ಭೋಜನಕ್ಕೆ ಆಮಂತ್ರಿಸಿ ಊಟದಲ್ಲಿ ವಿಷ ಬೆರಸಿ ರಾಜನನ್ನು ಪರಲೋಕಕ್ಕೆ ಕಳಿಸಿದನು.

ರಾಣಿ ತನ್ನ ಮಗ ನವಲಷಾಹ ರಕ್ಷಣೆಗಾಗಿ ಗಿನ್ನೌರಗಡದಿಂದ ಭೂಪಾಲಗೆ ಬಂದಳು. ಭೂಪಾಲದ ಸಣ್ಣ ಕೆರೆ ಹತ್ತಿರ ರಾಣಿ ಮಹಲ್ ಇತ್ತು. ಇತಿಹಾಸಕಾರ ಸಂಭೂದಯಾಲ್ ಗುರು ಪ್ರಕಾರ ದೋಸ್ತ ಮಹ್ಮದ ಖಾನ್ ಹಣಪಡೆದು ಜನಗಳಿಗೆ ಸಹಾಯಮಾಡುವ ಸಂಚು ನಡೆಸುತ್ತಿದ್ದನು. ಒಂದು ಮಾಹಿತಿ ಪ್ರಕಾರ ರಾಣಿ ಮೊಹ್ಮದಖಾನನಿಗೆ ರಾಖಿ ಕಟ್ಟಿ ಸಹೋದರ ಸಂಬಂಧ ಬೆಳೆಸಿದರು. ಮುಂದೆ ಅವನಿಂದ ತನ್ನ ಪತಿ ಕೊಲೆಗಡುಕ ಆಲಮಷಹಾಗೆ ಪಾಠಕಲಿಸಲು ಸಹಾಯ ಯಾಚಿಸಿದಳು. ದೊಸ್ತ ಮಹ್ಮದಖಾನ 1 ಲಕ್ಷ ರೂಪಾಯಿ ಯೊಂದಿಗೆ ಒಪ್ಪಂದ ಮಾಡಿಕೊಂಡನು. ಯುದ್ಧದಲ್ಲಿ ಅಲಮ ಷಹಾನನ್ನು ಕೊಲೆ ಮಾಡಿದನು. ಆದರೆ ಅವನಿಗೆ ಕೋಡಬೇಕಾದ ಪೂರ್ಣ ಹಣ ರಾಣಿಯಿಂದ ತಕ್ಷಣ ಆಗದ್ದರಿಂದ ಭೂಪಾಲನ ಒಂದು ಭಾಗ ಮೊಹ್ಮದಖಾನನಿಗೆ ನೀಡಿದಳು. ಸ್ವಲ್ಪ ಸಮಯದ ನಂತರ ಮಹ್ಮದಖಾನನ ಸ್ವಾರ್ಥ, ದುರಾಸೆ ವಿಶ್ವಾಸಘಾತಕತನ ಗುಣಗಳು ಹೆಡೆ ಬಿಚ್ಚಿದವು. ಭೂಪಾಲ ತನ್ನ ವಶಕ್ಕೆ ಪಡೆಯ ಬಯಸಿದನು ಮತ್ತು ರಾಣಿಯೆಡೆಗೆ ತನ್ನ ದೃಷ್ಠಿ ಹರಸಿದನು. ರಾಣಿಯ ಮಗ ನವಲಷಹಾ ತಾಯಿಯ ರಕ್ಷಣೆಗಾಗಿ ಮಹ್ಮದಖಾನ ಜೊತೆ ಯುದ್ಧಮಾಡಿದನು. ಯುದ್ಧ ಭೀಕರವಾಗಿತ್ತು. ಇಡೀ ರಣರಂಗವೇ ರಕ್ತದ ಹೊಳೆಯಾಗಿತ್ತು. ಭೂಪಾಲದ ಪ್ರದೇಶವನ್ನು ಇಂದು ಲಾಲ ಘಾಟಿ ಎಂದು ಕರೆಯುತ್ತಾರೆ. ತಾಯಿಯ ಮಾನರಕ್ಷಣೆಗಾಗಿ ಮಗ ನವಲಷಹಾ ಸೈನಿಕರು ಪ್ರಾಣ ಕಳೆದುಕೊಂಡರು. ಅಳಿದುಳಿದ ಸೈನಿಕರು ಬೆಂಕಿ ಉರಿಸಿ ಲಾಲಘಾಟಿ ಕಡೆ ಹೊಗೆ ಹಾಕಿದರು. ಮಹಲ್‌ನಲ್ಲಿದ್ದ ರಾಣಿಗೆ ಪರಿಸ್ಥಿತಿ

ಅರ್ಥವಾಯ್ತು. ತನ್ನ ನಂಬಿಗಸ್ಥರ ಜೊತೆ ಲಾಲಘಾಟಿ ಕೆರೆಕಡೆ ಗುಪ್ತಮಾರ್ಗದಿಂದ ತಲುಪಿದರು. **ರಾಣಿ ತನ್ನ ಸಂಪೂರ್ಣ ವೈಭವದೊಡನೆ ಕೆರೆಯ ತಳಬಾಗದಲ್ಲಿ ಮುಳಗಿ ಜಲಸಮಾಧಿಯಾಗಿ ತನ್ನ ಶೀಲ ಮತ್ತು ಮಾನ ರಕ್ಷಣೆ ಮಾಡಿಕೊಂಡಳು. ಈ ರೀತಿ ಜಲಸಮಾಧಿಯನ್ನು ಜಲಜೋಹರ ಎಂದು ಕರೆಯುಬಹುದು.** ಇಂದಿಗೂ ರಾಣಿ ಮಹಲ್ 5 ಅಂತಸ್ತುಗಳು ಜಲದಲ್ಲಿವೆ. ಕೇವಲ 2 ಅಂತಸ್ತುಗಳು ಮೇಲೆ ಕಾಣುತ್ತವೆ. ರಾಣಿಯ ಪತೀತ್ವ, ಸಾಹಸಗಾಥೆ ಸರೋವರ ನೋಡಲು ಬಂದು ಸೆಲ್ಪಿ ತೆಗೆದು ಕೊಳ್ಳುವ ಯುವಕರಿಗೆ ಧೌಭಾರ್ಗ್ಯದ ಕಥೆಯನ್ನು ತಿಳಿಸುವವರಾರು? ಯಾರು, ಯಾವಾಗ ಈ ಮಹಲ್ ಕಟ್ಟಿಸಿದರು. ಭಾರತದ ಸುಪುತ್ರಿಯ ಇತಿಹಾಸ ತಿಳಿಸಬೇಕಾಗಿದೆ.

1723ರಲ್ಲಿ ರಾಣಿ ಕಮಲಾಪತಿ ಜಲಸಮಾಧಿಯಾದಳು. ಅಲ್ಲಿಂದ ಮುಸ್ಲಿಂ ನವಾಬರ ಆಳ್ವಿಕೆ ಭೂಪಾಲದಲ್ಲಿ ಆರಂಭವಾಯಿತು. ದೊಸ್ತ ಮಹ್ಮದಖಾನನಿಂದ ಭೂಪಾಲದಲ್ಲಿ ಮುಸ್ಲಿಂ ನವಾಬರ ಪ್ರಥಮ ಆಳ್ವಿಕೆ ಆರಂಭ ವಾಯಿತು. ಭೂಪಾಲ ನಗರದಲ್ಲಿ ಆಡಳಿತ ಮಾಡುವ ಮುಸ್ಲಿಂ ಮಹಿಳೆಯರನ್ನು ಬೇಗಂ ಎಂದು ಸಂಭೋಧಿಸಲಾಗುತ್ತಿತ್ತು. 1901 ರಿಂದ 1923 ವರೆಗೆ ಭೂಪಾಲದಲ್ಲಿ ಜಹಾನ್ ಬೇಗಂ ಆಡಳಿತವಿತ್ತು. ಅವಳು ತನ್ನ ಮೊಮ್ಮಗ ಹಬೀಬುಲ್ಲಾ ಹೆಸರಿನಿಂದ ಭೂಪಾಲದ ಒಂದು ಪ್ರದೇಶದ ಹೆಸರನ್ನು ಹಬೀಬಗಂಜ ಎಂದು ಇಟ್ಟಳು. ಅಲ್ಲಿ ರೈಲು ನಿಲ್ದಾಣ ನಿರ್ಮಾಣವಾದಾಗ ಅದರ ಹೆಸರು ಹಬೀಬಗಂಜ ರೈಲು ನಿಲ್ದಣವಾಯ್ತು.

ಆದಿವಾಸಿಗಳ ಸಮುದಾಯವನ್ನು ಸಶಕ್ತೀಕರಣದ ದಿಕ್ಕಿನಲ್ಲಿ ಪ್ರತ್ಯೇಕ ಆದಿವಾಸಿಗಳ ಕ್ಷೇಮಾಭಿವೃದ್ಧಿ ಮಂತ್ರಾಲಯ ನಿರ್ಮಿಸಿ ಮೈಲುಗಲ್ಲನ್ನು ಸ್ಥಾಪಿಸಿದ್ದರು. ಅವರಿಗೆ ಕಾನೂನು ಸಹಾಯ ಮತ್ತು ಮೀಸಲಾತಿಯ ನ್ಯಾಯ ನಿರಂತರವಾಗಿ ಸಿಗುವಂತಾಗಲು ಸಮುದಾಯ ಹೆಚ್ಚು ಸಶಕ್ತವಾಗಲು ಅವರ ಬಾಳಲ್ಲಿ ಬೆಳಕು ಮೂಡುವಂತಾಗಲು **"ಅಬುವಾ ರಾಜ ಎತೆ ಜನಾ, ಮಹಾರಾಣಿ ರಾಜ ತುಂಡು ಜನಾ" ಅಂದರೆ ರಾಣಿ ರಾಜ್ಯ ಮುಕ್ತಾಯವಾಗಲಿ ನಮ್ಮ ರಾಜ್ಯ ಸ್ಥಾಪನೆಯಾಗಲಿ** ಎಂಬ ಉದ್ಘೋಷದ ಮೂಲಕ ವನವಾಸಿ ಪಂಗಡಗಳಿಗೆ ಬ್ರಿಟಿಷರ್ ವಿರುದ್ಧ ಹೋರಾಡಲು ಪ್ರೇರಣೆ ನೀಡಿದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರು 25 ವರ್ಷದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಮೂಲ್ಯ ಕೊಡುಗೆ ನೀಡಿ ರಾಷ್ಟ್ರಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡ ವೀರಯೋಧರಿಗೆ

ನಮನ ಸಲ್ಲಿಸಿ ಗೌರವಿಸಿದಂತಾಗಿದೆ. ಇತಿಹಾಸದಲ್ಲಿ ಸರಿಯಾಗಿ ಕಲಿಸದ ಸಂಗತಿಗಳನ್ನು ತಪ್ಪುಗಳನ್ನು ಸುಧಾರಿಸಿಕೊಳ್ಳುವ ಪ್ರಯತ್ನ ಸಾಗಿದೆ. ಇತಿಹಾಸ ಗೌರವಿಸಬೇಕಾದತಂಹವರನ್ನು ಗೌರವಿಸುವ ಪದ್ಧತಿ ಪುನರಾರಂಭವಾಗಿದೆ.

ಅದೆಷ್ಟು ರಾಣಿ ಕಮಲಾಪತಿಯಂತಹವರು ರಾಣಿಮಹಲ್‌ಗಳಂತಹ ಭಾರತದ ಇತಿಹಾಸದ ಮಹಲ್‌ಗಳಲ್ಲಿ ಮುಳುಗಿದ್ದಾರೋ? ಅಂತಹವರ ವೀರಗಾಥೆಯನ್ನು ನಗರ ಮತ್ತು ಗ್ರಾಮಗಳ ಜನರಿಗೆ ತಿಳಿಸಲು ನಮ್ಮ ಸ್ಥಳದಲ್ಲಿರುವ ನಿಲ್ದಾಣಗಳಿಗೆ, ವೃತ್ತಗಳಿಗೆ, ಆಯಾ ಸ್ಥಳದಲ್ಲಿ ಜನಿಸಿ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಮಹಾಪುರುಷರ ಹೆಸರಿಟ್ಟು ಕೃತಜ್ಞತೆ ಸಲ್ಲಿಸಬೇಕು. ಇತಿಹಾಸದ ಪುನಸ್ಮರಣೆ ಮಾಡಿಸಬೇಕು. ಪರಂಪರೆಯನ್ನು ಜ್ಞಾಪಿಸಬೇಕು. ರಾಜ ದುಷ್ಯಂತ ತನ್ನ ರಾಣಿ ಶಕುಂತಲೆಯನ್ನು ಮರೆತಂತೆ, ವಿಸ್ಮೃತಿಯಲ್ಲಿರುವ ಭಾರತೀಯರಿಗೆ ಮತ್ತೊಮ್ಮೆ ಅಭಿಜ್ಞಾನ ಉಂಗುರ ತೋರಿಸಿ ಇತಿಹಾಸ ಸ್ಮರಣೆ ಮಾಡಿಸಬೇಕಾದ ಜವಾಬ್ದಾರಿ ಇಂದಿನ ಪೀಳಿಗೆಯವರಿಗೆ ಎಂಬುದನ್ನು ಅರ್ಥಮಾಡಿಸಬೇಕು. ಮಹಾಪುರುಷರನ್ನು ಸ್ಮರಿಸುವ ಮೂಲಕ ಗುಲಾಮಿತನದ ಪರದೆ ಕಿತ್ತು ಬಿಸುಡಾಲು ಅದೆಷ್ಟು ಜನ ಹುತಾತ್ಮರಾದರು ಎಂಬುದನ್ನು ಸ್ಮರಿಸಬೇಕು. ಸ್ವಾತಂತ್ರ್ಯ ಸರಳವಾಗಿ ಸಿಕ್ಕದಲ್ಲ. ಅದಕ್ಕಾಗಿ ಭಾರತೀಯರು ತೆತ್ತ ಮೌಲ್ಯ ಅಪಾರ, ಅತ್ಯಮೂಲ್ಯ ಎಂಬ ಕಲ್ಪನೆ ಯುವ ಪೀಳಿಗೆ ಮಾಡಿಸುವಲ್ಲಿ ರಾಣಿ ಕಮಲಾಪತಿ ರೈಲುನಿಲ್ದಾಣ ಒಂದು ದಿಟ್ಟ ಹೆಜ್ಜೆಯಾಗಿದೆ. ಇಂದಿಗೂ ಅನೇಕರಿಗೆ ಅಲಹಾಬಾದಗೆ–ಪ್ರಯಾಗರಾಜ, ಹೋಶಿಂಗಬಾದ–ನರ್ಮದಾಪುರ ಮೊಗಲಸರಾಯಿ ರೈಲ್ವೇಸ್ಟೇಶನ್–ದೀನದಯಾಳ ರೈಲು ನಿಲ್ದಾಣ, ಗುಲಬರ್ಗಾಕ್ಕೆ ಕಲಬುರ್ಗಿ, ಮದ್ರಾಸ್‌ಗೆ–ಚನ್ನೈ, ಬೊಂಬಾಯಿಗೆ–ಮುಂಬಯಿ, ಫೈಜಾಬಾದಗೆ–ಅಯೋಧ್ಯೆ ಎಂದು ಹೆಸರು ಇಟಂತೆ ದೇಶದ ಅನೇಕ ನಗರ ಗ್ರಾಮಗಳ ಹೆಸರುಗಳನ್ನು ಬದಲಾಯಿಸಿ ಇಡಲಾಗಿದೆ ಎಂಬುದರ ಮಾಹಿತಿ ಇಲ್ಲ. ಭಾರತವಾಸಿಗಳಾದ ನಾವು ಈ ಹೆಸರುಗಳನ್ನು ನಿತ್ಯ ವ್ಯವಹಾರದಲ್ಲಿ ಬಳಸಬೇಕಾಗಿದೆ. ಉದಹಾರಣೆಗೆ ಕಲಬುರ್ಗಿಯಲ್ಲಿ ಸರ್ದಾರ್ ವಲ್ಲಭಬಾಯಿ ಪಟೇಲ್ ವೃತ್ತ ಎಂದು ನಾಮಕರಣ ಮಾಡಿ ಹಲವಾರು ವರ್ಷಗಳೇ ಕಳೆದರೂ ಕಲಬುರ್ಗಿ ಜನ ಇನ್ನೂ ತಿಮ್ಮಾಪುರಿ ಚೌಕ ಎಂದೇ ಕರೆಯುತ್ತಾರೆ. ಕಲಬುರ್ಗಿ ಬದಲಾಗಿ ಗುಲಬರ್ಗಾ ಎಂದು ಹೇಳುತ್ತಾರೆ. ಭಾರತೀಯರಾದ ನಾವು ಗುಲಾಮಿ ಮಾನಸಿಕತೆಯಿಂದ ಹೊರಬಂದು. ಆಕ್ರಮಣಕಾರರ ಕಳಂಕ ಅಳಿಸಿ, ಅಲ್ಲಿ ಸ್ವಾಭಿಮಾನದ ಸೂರ್ಯ ಉದಯಿಸುವಂತೆ ಮಾಡುವಲ್ಲಿ ಸ್ವಾತಂತ್ರ್ಯ

ಹೋರಾಟಗಾರರ ಹೆಸರಲ್ಲಿ ವೃತ್ತ ಮತ್ತು ರಸ್ತೆಗಳನ್ನು ಹೆಸರಿಸಬೇಕು. ಮತ್ತು ಆಕ್ರಮಣಕಾರರು ಬದಲಾಯಿಸಿದ ನಮ್ಮ ಗ್ರಾಮ ನಗರಗಳ ಹೆಸರುಗಳನ್ನು ಪುನಃ ಮುಂಚಿನ ಹೆಸರಿನಿಂದ ಕರೆದು ಸ್ವಾಭಿಮಾನ ಮೆರೆಸಬೇಕಾಗಿದೆ. ಹಬೀಬ ಗಂಜ್ ರೈಲು ನಿಲ್ದಾಣಕ್ಕೆ ರಾಣಿ ಕಮಲಾಪತಿ ರೈಲು ನಿಲ್ದಾಣ ಹೆಸರು ಇಡುವ ಘನಕಾರ್ಯ ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷದಲ್ಲಿ ಆಗಿದೆ ಎನ್ನುವುದು ಅತ್ಯಂತ ಮಹತ್ವದ ಹಾಗೂ ಅಭಿಮಾನದ ಸಂಗತಿಯಾಗಿದೆ.

## REFERENCE BOOKS:

1. Pacharhi Travel Guide: Includes Bhopal, Bhimetka and Jabalpur, 2020.
2. English Version of "Kumaun Ka Itihas", Volume 1, 1993.